ಅಸಲು ದಾವಾ ಸಂಖ್ಯೆ583/2019

ಪಿ.ಡಬ್ಲ್ಯು:1

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ದಿನಾಂಕ 10.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ. ಬಿ.ಆರ್.ಆರ್. ಪ್ರತಿವಾದಿ ಪರ ವಕೀಲರಿಂದ**

ನನ್ನ ತಾಯಿ ಪ್ರತಿವಾದಿಗೆ ದಾನಪತ್ರ ಬರೆದಿರುವ ವಿಚಾರ 2013 ತಿಳಿಯಿತು. 2013 ರಂದು ನನ್ನ ತಾಯಿ ಬರೆದಿರುವ ದಾನಪತ್ರದ ಕ್ರಮಬದ್ದತೆಯನ್ನು ಪ್ರಶ್ನಿಸಲು ತೊಂದರೆ ಇರಲಿಲ್ಲ. ದಾನ ಪತ್ರದ ಪ್ರತಿಯನ್ನು ನೋಂದಣಿ ಕಚೇರಿಯಿಂದ 2013 ರಲ್ಲಿ ಪಡೆದಿದ್ದೇನೆ. 2013 ರಿಂದ ಈ ದಾವೆ ಸಲ್ಲಿಸಿದ ವೇಳೆಗೆ ನನ್ನ ತಾಯಿಯು ಪ್ರತಿವಾದಿಗೆ ದಾನಪತ್ರ ಬರೆದಿರುವ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನನ್ನ ತಾಯಿಯು ಆಕೆಯ ತಾಯಿಯಾದ ಗಂಗಮ್ಮರವರಿಂದ ಖರೀದಿಸಿದ್ದರು ಎಂದರೆ ಸರಿ. 1985 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಜೊತೆಗೆ ಸ.ನಂ.109 ಮತ್ತು ಸ.ನಂ.107 ಸ್ವತ್ತುಗಳನ್ನು ಖರೀದಿಸಿದ್ದರು ಎಂದರೆ ಸರಿ. ಸದರಿ ಸ.ನಂ.109 ಮತ್ತು ಸ.ನಂ.107 ರ ಪೈಕಿ ಯಾವ ಸ್ವತ್ತನ್ನು ನಿಮ್ಮ ತಾಯಿಗೆ ಬಿಟ್ಟುಕೊಟ್ಟಿದ್ದೀರಾ ಎಂದರೆ ಎರಡೂ ಸ್ವತ್ತುಗಳನ್ನು ವಿಭಾಗ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ಬ್ರಹ್ಮಸಮುದ್ರ ಸ.ನಂ.305/ಪಿ ವಿಸ್ತೀರ್ಣ 4 ಎಕರೆ ಸ್ವತ್ತು ನನ್ನ ತಂದೆ ದೊಡ್ಡ ಮಲ್ಲಪ್ಪರವರಿಗೆ ಸೇರಿದ್ದು ಎಂದರೆ ಸರಿ. ಸದರಿ ಸ್ವತ್ತನ್ನು ನಾವೆಲ್ಲರೂ ಸೇರಿ ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ. ಯಾವಾಗ ಮಾರಾಟ ಮಾಡಲಾಗಿದೆ ಗೊತ್ತಿಲ್ಲ. 1994 ರ ಪೂರ್ವದಲ್ಲಿಯೆ ಆ ಸ್ವತ್ತನ್ನು ಮಾರಾಟ ಮಾಡಿದ್ದೇವೆ.

ನಿಪಿ-8 ರಲ್ಲಿ ಯಾವ ಸ್ವತ್ತು ಯಾರಿಗೆ ಹೋಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ಚೆಕ್ಕುಬಂದಿ, ಇತರೆ ವಿವರಗಳು ಇಲ್ಲ ಎಂದರೆ ಸರಿ. ಸದರಿ ಪತ್ರ ಬರೆಯುವ ಕಾಲಕ್ಕೆ ಗುರುಮಲ್ಲಪ್ಪ, ಮಹೇಶ್ವರಪ್ಪ, ವಿ.ನಂಜುಂಡಪ್ಪ, ಜಯದೇವಪ್ಪ ಇನ್ನು ಕೆಲವರು ಇದ್ದರು. ಸದರಿ ಪತ್ರದ ಬಿಕ್ಲಮದಾರರು ಚನ್ನಬಸಪ್ಪ. ನಿಪಿ-8 ರಲ್ಲಿ ಚನ್ನಬಸಪ್ಪರವರ ಹೆಸರು ಮತ್ತು ಸಹಿ ಇಲ್ಲ. ಸಾಕ್ಷಿಯು ಸ್ವತಃ ಪತ್ರವನ್ನು ಬರೆದವರು ಸಹಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಸದರಿ ಪತ್ರ ಬರೆಯಲಾಗಿದೆ ಎಂದು ನಮೂದಿಸಿಲ್ಲ. 1994 ರಲ್ಲಿ ನಾವು ವಿಭಾಗ ಮಾಡಿಕೊಂಡಿದ್ದು, ಆ ದಿನ ನಾವು ದಾವಾ ಸ್ವತ್ತನ್ನು ನನ್ನ ತಾಯಿಯ ಜೀವನಾಂಶಕ್ಕೆ ಬಿಟ್ಟುಕೊಟ್ಟಿದ್ದೇನೆ. ನಿಪಿ-8 ರಲ್ಲಿ ನನ್ನ ತಾಯಿಯ ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ. ದಾವಾ ಸ.ನಂ.31 ಸ್ವತ್ತನ್ನು ನನ್ನ ತಾಯಿಗೆ ಬಿಟ್ಟುಕೊಟ್ಟಿದ್ದೇವೆ ಎಂದು ತಿಳಿಸಿದ್ದು, ಆದರೆ ನಿಪಿ-8 ರಲ್ಲಿ ದಾವಾ ಸ್ವತ್ತಿನ ವಿವರವನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ-8 ದಾಖಲೆಯು ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿಯು ಕ್ರಯದ ಮೂಲಕ ಪಡೆದ ಸ್ವತ್ತನ್ನು ಪ್ರತಿವಾದಿಗೆ ದಾನದ ಮೂಲಕ ನೀಡಿದ್ದಾರೆ ಎಂದರೆ ನನಗೆ ಭಾಗಾಂಶ ಬರಬೇಕೆಂದು ನುಡಿಯುತ್ತಾರೆ.

ನನ್ನ ಹಾಗೂ ಪ್ರತಿವಾದಿ ನಡುವೆ ಒಟ್ಟು ಮೂರು ದಾವೆಗಳಿಗೆ ಎಂದರೆ ನಾಲ್ಕು ದಾವೆಗಳು ಇರುವುದಾಗಿ ನುಡಿಯುತ್ತಾರೆ. ಪ್ರತಿವಾದಿಯು ನನ್ನ ವಿರುದ್ಧ ಅ.ದಾ.ಸಂಖ್ಯೆ 581/2020 ರಂತೆ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯನ್ನು ವಿಭಾಗಾಂಶ ಕೋರಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅ.ದಾ.ಸಂಖ್ಯೆ 581/2020 ರ ದಾವೆಯಲ್ಲಿ ಸ.ನಂ.107/3 ಪಿ1 ವಿಸ್ತೀರ್ಣ ಸ್ವತ್ತಿನ

ಸಂಬಂಧ ಮಾತ್ರ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅ.ದಾ.ಸಂಖ್ಯೆ 581/2020 ರಲ್ಲಿ ಸಲ್ಲಿಸಿರುವ ತಕರಾರಿನಲ್ಲಿ ಈ ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದು ತಿಳಿಸಿದ್ದೇವೆ. ಸದರಿ ತಕರಾರನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತಾಗಿದ್ದು, ಅದನ್ನು ನನ್ನ ತಾಯಿ ಪ್ರತಿವಾದಿಗೆ ದಾನದ ಮೂಲಕ ನೀಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ
Sd/- 10.06.26
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡೂರು